Regd No B G 155 Sri 18—5—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅನುಮೆಹುಸ್ತೇದಾರ್ ಎಂ ಎ ಸುಬ್ಬರಾಹುರು ‖ ಸಂಪಾದಕರ — ಧರ್ಮಪ್ರಚಾರವಿಂಶ ಎಂ ಎಸ್ ಕೃಷ್ಣರಾವ್ 2ಪೈಸೆ

ಭಾರತದ ಮೇಲೆ ಆಪಾದನೆ

ಭಾರತ ಗಡಿಯಲ್ಲಿ ಪೂರ್ವಪಾಕಿಸ್ತಾನದ ದಿನಾಜಪುರ ಜಿಲ್ಲೆ ಎದುರಿಗೆ ವಿಶೇಷ ಸೇನಾಪಡೆ ಜನವಾವಣೆಯನ್ನು ಭಾರತ ಮಾಡಿದೆ ಎಂದು ಪಾಕಿಸ್ತಾನದ ಆಪಾದನೆ ಮಾಡಿದೆ.

ಅಣು ಸ್ಫೋಟ

ಶುಕ್ರವಾರ ಸ್ಫೋಟವಾದ ಚೀನಾದ ಎಡನೆ ಅಣು ಬಾಂಬು ಕ್ಷಿಪಣಿಯಲ್ಲಿ ಎತ್ತಿಕೊಂಡು ಹೋಗಬಹುದಾಗಿ ಟೋಕಿಯೋದ ಅಶಾಹಿಷಿಂಬುನ್ ಪತ್ರಿಕೆ ಪ್ರಕಶಿಸಿದೆ.

ಸಂಶೋಧನೆ

ಮುಂದೆ ಸಮುದ್ರದ ತಳಗೆ ಗದ್ದೆ ಹೊಲಗಳು ಆಗಬಹುದೆಂದು ಸಂಶೋಧನೆಗಳಿಂದ ಹೊಂಪಟ್ಟಿತೆ.

ಸೇರಿತ್ತಿಲ್ಲ

ರಾಜ್ ಎಂದೂ ಪಾಕಿಸ್ತಾನಕ್ಕೆ ಸೇರಿದ್ದಲ್ಲವೆಂದು 37-38 ರಲ್ಲಿ ಸಿಂಧ ಸರಕಾರದ ಮಂತ್ರಿ ಆಗಿದ್ದ ಡಾ|| ಹೇಮುಂದಾಸ ವಾಧ್ವಾನವರು ಹೈದರಾಬಾದಿನಲ್ಲಿ ತಿಳಿಸಿದರು

ದೀರ್ಘ ಮಾತುಕತೆ

ಕರಾಚಿಯಿಂದ ಬಂದಿರುವ ವರದಿಯ ಪ್ರಕಾರ ಕಚ್ ಸಮಸ್ಯೆ ಕುರಿತು ಪಾಕೀಸ್ತಾನದ ಬ್ರಿಟಿಷು ಹೈ ಕಮಿಷನರಾದ ಶ್ರೀ ಮಾಸ್ ಜೇಂಸರು ನೊಸ್ಸೆ ದೀರ್ಘಕಾಲ ಮಾತುಕತೆ ನಡೆಸಿದರೆಂದು ಅಸಂತರ ಆಧ್ಯಕ್ಷ ಅಯೂಬರನ್ನು ಕಂಡಿದ್ದರು

ಆನೆ ತುಳಿತದಿಂದ ಸಾವು

ಕುಂಭಕೋಣದಲ್ಲಿ ನೊನ್ನೆ ಮಾರಿಯಮ್ಮ ದೇವಾಲಯದ ಉತ್ಸವದಲ್ಲಿ ಒಂದು ಎಮ್ಮೆ ಒಂದು ಆನೆಯ ಕಾಲುಗಳ ನುಗ್ಗಲು ಆನೆ ಗಾಬರಿಗೊಂಡು ಓಡಾಡುತ್ತಾ ವಾಧ್ಯ ಸಿಕ್ಕಿದ ಒಂದು ಹುಡಗಿಯನ್ನು ತುಳಿದು ಸಾಯಿಸಿತು.

ಹೆಚ್ಚಿದ ಸಾವು

ಬುಧವಾರದಲ್ಲಿ ಆದ ಚಂಡವಾಯುವಿನ ಹಾವಳಿಯಿಂದ ಆರು ಸಾವಿನಿಂದ ಎಂಟೂವರೆ ಸಾವಿಂದ ವರಿಗೆ ಮುಂಣ ಆಗಿರುವದೆಂದು ಕಾವಲ್ಮಿಂಡಿಯಿಂದ ಬಂದಿರುವ ಅನಧಿಕೃತ ವರ್ತಮಾನ ತಿಳಿಸುತ್ತದೆ.

ಸಮಿತಿ ರಚನೆ

69 ನೇ ಅಕ್ಟೋಬರು 2 ರಂದು ನಡೆಯುವ ಮಹಾತ್ಮಾ ಗಾಂಧಿಯವರ ಶತಮಾನೋತ್ಸವ ಕಾರ್ಯಕ್ರಮ ನಿರ್ಧರಿಸಲು ಮುಖ್ಯಮಂತ್ರಿಗಳು ಜನರ ರಾಜ್ಯಮಟ್ಟದ ಸಮಿತಿ ರಚನೆ ಆಗಿರುವದಾಗಿ ದೆಂದಲೂರಿನಿಂದ ವರ್ತಮಾನ ಬಂದಿದೆ ಮೈಸೂರು ಮಹಾರಾಜರವರು ಇದರ ಪೋಷಕ ಸದಸ್ಯರು

ವಿಗ್ರಹಗಳು ಸಿಕ್ಕಿವೆ

ತಂಜಾವೂರಿನ ಅಕ್ಕೂರು ಗ್ರಾಮದಲ್ಲಿ ಹೊಸ ಕಾಳಿಯಮ್ಮನ ದೇವಾಲಯವನ್ನು ಕಟ್ಟಲು ಅಗೆಯುತ್ತಿದ್ದಾಗ ಸುಂದರವಾದ ಸೋಮಸ್ಕಂದ, ಶಿವ ಕಾಮಿ, ಳಿರು ಜ್ಞಾನ ಸಂಬಂಧರ ಮತ್ತು ವಿನಾಯಕರ 5 ವಿಗ್ರಹಗಳು ಸಿಕ್ಕಿವೆ

ಎಕ್ಕಿ ಕೊಡಬೇಡಿ

ಬೊಂಬಾಯಿನಿಂದ ಈ ರೀತಿ ವರದಿ ಒಂದಿದೆ ಕಲ್ಕತ್ತಾದ ಕೆಲವು ವರ್ತಕರು ಜೊತೆಗೆ ಪೂರ್ವ ಪಾಕಿಸ್ತಾನಕ್ಕೆ ಹತ್ತು ಸಾವಿರ ಟನ್ನುಗಳ ಉಕ್ಕಿನ ಸರಳುಗಳನ್ನು ರಫ್ತು ಮಾಡಲು ಏರ್ಪಡಿಸಿರುವರು ಇದು ಗಡಿಯಲ್ಲಿ ಮಿಲಿಟರಿ ಕಾರ್ಯಕ್ಕೆ ಉಪಯೋಗಿಸಿ ಮಾಡಬಹುದಾದ ಸಾಧ್ಯವಿರುವದರಿಂದ ಈ ರಫ್ತನ್ನು ಪ್ರತಿಬಂಧಿಸಬೇಕೆಂದು ಪಾರ್ಲಿಮೆಂಟಿನ ಸದಸ್ಯ ಶ್ರೀ ನಾಥ ಪೈ ಕೇಂದ್ರ ಸರ್ಕಾರಕ್ಕೆ ಕಂತಿ ಕಳಿಸಿರುವರು.

ಅತ್ಯವಶ್ಯವಾದ ಪದಾರ್ಥಗಳ ಜೆಲಿಯಾನ್ನು ಕೂಡಲೇ ತಹಬಂದಿಗೆ ತಂದಿಡದಿದ್ದರೆ ಸರ್ಕಾರಕ್ಕೆ ವಿರುದ್ಧವಾಗಿ ನೇರ ಕಾರ್ಯಾಚರಣೆ ನಡೆಸುವುದಾಗಿ ಶಿವಸೇನೆಗಾಗಿ ಪೌಸಭೆ ನಿರ್ಧರಿಸಿದೆ.

ಕಚ್ ರಾಣನಲ್ಲಿ ಪಾಕಿಸ್ತಾನ ನಡೆಸಿರುವ ಆಕ್ರಮಣವನ್ನು ಖಂಡಿಸಲು ಅಮೆರಿಕಾ ಹಾಗೂ ಬ್ರಿಟನ್‌ಗಳು ಇಚ್ಛಿಸದಿರುವ ಕುರಿತು ಕಾಂಗ್ರೆಸ್ಸು ಅಧ್ಯಕ್ಷರಾದ ಶ್ರೀ ಕಾಮರಾಜರು ತಿರುನೆಲ್ವೇಲಿಯಲ್ಲಿ ಟೀಕಿಸಿದರು

ಯುದ್ಧ ವಿರಾಮಕ್ಕೆ ಅಧ್ಯಕ್ಷ ಜಾನ್ಸನ್‌ರು ಕೊಟ್ಟಿರುವ ಸಲಹೆಯನ್ನು ಉತ್ಸಾಹದಿಂದ ಸ್ವಾಗತಿಸಿದೆ ಎಂದು ಹಾಂಕಾಂಗ್ ವರ್ತಮಾನ ಸ್ಥಿತಿಗತಿ ನೋಡಿದರೆ ಕಟ್ಟಕಡೆ ವಿಜಯದ ವರೆಗೂ ಉತ್ತರ ಮತ್ತು ದಕ್ಷಿಣ ವಿಯಟ್ನಾಂ ಕಾದಾಡುವಂತಿದೆ ಎಂದು ನಾನ್ದಿಂಗ್ ಪತ್ರಿಕೆ ಪ್ರಕಟಿಸಿದೆ:

ಅಣು ಸ್ಫೋಟದಿಂದ ಬೀಳುವುದನ್ನು ಪತ್ತೆ ಮಾಡಲು ಮೆಟ್ರೋಲಾಜಿಕಲ್ ಡಿಪಾರ್ಟ್‌ಮೆಂಟಿನವರು ಭಾರತದ 5 ಕಡೆ ವಾಯುವಿನ ಮಾದರಿಯನ್ನು ಶೇಖರಿಸುತ್ತಿರುವರು ಎಂದು ನವದೆಹಲಿಯಿಂದ ತಿಳಿಸುತ್ತದೆ.

ನಾಗಾ ಭೂಗತ ನಾಯಕರು ಮತ್ತು ಶಾಂತಿ ನಿಯೋಗವು ದಿನಾಂಕ 8 ರಂದು ಮಾತುಕತೆ ನಡೆಸಲಿರುವುದಾಗಿ ಸಿಲಾಂಗಿನಿಂದ ವರದಿಯಾಗಿದೆ.

ಸಮಾಚಾರ ಸಂಗ್ರಹ

ಬೊಂಬಾಯಿಗೆ ಇನ್ನೂರ ಐವತ್ತು ಮೈಲಿಗಳ ದೂರದ ಭೂಸವಾಲಿನ ಬಳಿ ಹತ್ತಿರ ಕಲ್ಪಲಾಗುತ್ತಿರುವ ಸೇತುವೆಯ ಒಂದು ಭಾಗವು ನೊನ್ನೆ ಬೆಳಿಗ್ಗೆ 7 ಕಾರ್ಮಿಕರು ಮರಣಹೊಂದಿದರು.

★

ಭಾರತ ಪ್ರಧಾನಮಂತ್ರಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರು ರಷ್ಯದ ಪ್ರಧಾನಿ ಕೋಸಿಜಿನ್‌ರವರು ಲೆನಿನ್‌ಗ್ರಾಡಿಗೆ ಆಗಮಿಸಿದರು ಜನರು ಸಾವಿರ ಗಟ್ಟಲೆ ಸೇರಿ ಪುಸ್ಪಾಗತಿಸಿದರು ಹಿಂದಿರುಗಿ ಭಾಯ: ಭಾಯಿ ಯಿಂದ ಸ್ವಾಗತಿ ಸಲಾಯಿತು ಎಂಡು ದೇಶಗಳ ಧ್ವಜವನ್ನು ಹಾರಿಸಲಾಯಿತು.

★

ನೊನ್ನೆ ಸಾವಿಂದ್ಯನೂರು ವಿದ್ಯಾರ್ಥಿ ಪೋಧಕರು ವಿಯಟ್ನಾಂ ವಿಚಾರದಲ್ಲಿ ಬಹಿರಂಗ ಚರ್ಚೆ ನಡೆಸಿದರು. ನಾಳ್ಕು ಸಾವಿರಕ್ಕೆ ಹೆಚ್ಚು ಮಂದಿ ಇದನ್ನು ನೋಡಲು ಸೇರಿದ್ದರು ವಾತಾವರಣವನ್ನು ನಳ್ಳಿ ನಡೆದ ಈ ಸಭೆಯಲ್ಲಿ ಎಡ ಜ್ಞಾನ ನಳ್ಳಿ ಅಮೆರಿಕಾ ನೀತಿ ಕುರಿತು ಭಿನ್ನಾಭಿಪ್ರಾಯ ವ್ಯಕ್ತಪಡಿಸಲಾಯಿತು.

★

ನೊನ್ನೆ ಸೈಗಾನಿನಲ್ಲಿ ಬಿಯರ್‌ಹೋ ವಿಮಾನ ನಿಲ್ದಾಣದಲ್ಲಿ ಆದ ಭೀಕರ ಸ್ಫೋಟದಿಂದ 5 ಮಂದಿ ಸತ್ತರು 22 ವಿಮಾನಗಳು ಹಾಳಾದವು

ನಾಳೆಯಷ್ಟೆಸಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾದಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ಯಾಸಮ್ರಾಟ್
ಸಂಪತ್ಕುಮಾರ್ ಜೋಯಿಸರಿಂದ

19 ಬುಧವಾರ. ಚೈತ್ರ ಪೂರ್ಣಿಮಾ

ಅಪೂ(ಣ)ರ್ವ ಭಾಗ್ಯ

ಶ್ರೀ ಶಂಕರ ಜಯಂತಿಯು ಪರ್ವಕಾಲದಲ್ಲಿ ಶೃಂಗೇರಿ, ದ್ವಾರಕಾ ಮತ್ತು ಪುರಿ ಮಠಾಧಿಪತಿ ಶಂಕರಾಚಾರ್ಯರುಗಳು ಆದ್ಯ ಶಂಕರಾಚಾರ್ಯರ ಜನ್ಮಸ್ಥಳ ಕಾಲಡಿಯಲ್ಲಿ ಒಂದಾಗಿ ಸೇರಿದರು : ಬಹುಶಃ ಹೆಬ್ಬೆರಳೂ ಈ ರೀತಿ ನಡೆದಿಲ್ಲ ಹಿಂದೆ ಎಲ್ಲೆಲ್ಲೂ ಒಕ್ಕಟ್ಟಿನ ಮಾತು (ಕೇವಲ ಮಾತು ?) ಕೇಳಿ ಬರುತ್ತಿರುವಾಗ ಆದ್ಯ ಶಂಕರಾಚಾರ್ಯರು ಧರ್ಮೋದ್ಧಾರಣೆಗಾಗಿ ದೇಶದ ನಾಲ್ದೆಸೆಗಳಲ್ಲಿ ಸ್ಥಾಪಿಸಿದ ಮತದ ಶಂಕರಾಚಾರ್ಯರುಗಳು ಒಂದೆಡೆ ಸೇರಿ ಆ ಪವಿತ್ರ ಕಾರ್ಯದ ಕಾರಣ ಚಿಂತನೆ ಮಾಡಿದ್ದು ರಾಷ್ಟ್ರದ ಭಾಗ್ಯವೇ ಸರಿ.

ಆದರೆ, ದೇಶದ ನಾಲ್ದೆಸೆಗಳಲ್ಲಿರುವ ಶಂಕರಾಚಾರ್ಯರುಗಳು ಅಂದು ಒಂದಾಗಿ ಸೇರಿದೆ, ನಿಶ್ಚಯ ಮಾತ್ರ ಕಲೆತಿರುವುದು ಅಪೂರ್ವ ಭಾಗ್ಯವಾದರೂ ಅಪೂರ್ಣ ಭಾಗ್ಯವೇ ಇಡೀ: ಅವರೆಲ್ಲರೂ ಪೂರ್ಣ ಕುಂಭವೇಳದ ಸಮಯ ಪ್ರಯೋಗ ಪವಿತ್ರ ಕ್ಷೇತ್ರದಲ್ಲಾದರೂ ಸೇರಿ, ಅಪೂರ್ವ ಭಾಗ್ಯದ ಸದವಕಾಶವನ್ನೊದಗಿಸಿಕೊಡುವ ಕೃಪೆಮಾಡಬೇಕು ; ಆಗ ಮಾತ್ರ ಬಾಹ್ಯದೃಷ್ಟಿಗೆ ಕೈಂಡು ಬರುತ್ತಿರುವ ಭಿನ್ನವಾನೈಕ್ಯಭಾವನೆಯು ಪರಿಹಾರವಾದೀತು : ಈ ನಾಲ್ಕು ಮತಗಳಾದ್ಯಾವುವು ? ಕಂಚಿ ಕಾಮಕೋಟಿ ಮಠವೂ ಅದರಲ್ಲೊಂದೇ ? ಇಂತಹ ಪ್ರಶ್ನೆಗಳಿಂದು ಎತ್ತಿವೆಯಲ್ಲದೆ, ಯಾವುದನ್ನು ಆದ್ಯಶಂಕರಾಚಾರ್ಯರು ಸ್ಥಾಪಿಸಿದ್ದೆಂಬ ವಾದವೂ ಎದ್ದಿರುತ್ತದೆ ; ಇವೆಲ್ಲವುಗಳಿಗೆ ಸೂಕ್ತ ಉತ್ತರ ದೊರೆತು ಭಕ್ತಿ ಮನಸ್ಸುಸಲ್ಲಿರುವ ಸಂದೇಹ ಗತಿಹಾಂಪಾಗಬೇಕು : ರಾಷ್ಟ್ರೀಯ ಐಕ್ಯತೆ ಆಗ ಬಹಳ ಸುಲಭವಾಗುತ್ತದೆ.

ಕಾಲಡಿಯಲ್ಲಿ ನಡೆದ ಅಪೂರ್ವ ಏಲನವನ್ನು ಅಪೂರ್ಣ ಭಾಗ್ಯವೆನ್ನಲು ಇನ್ನೊಂದು ಕಾರಣವೂ ಇದೆ : ಅಖಿಲ ಭಾರತ ಶಂಕರ ಸೇವಾ ಸಮಿತಿಯು ಅದೇ ಸಮಾವೇಶದಲ್ಲಿ ಕೆಲ ವಿಷಯಗಳ ಕುರಿತು ತೀರ್ಮಾನಿಸಿರುತ್ತದೆ : ಅದು ಭಾರತ ಸರ್ಕಾರದ ಬಳಿ, ಶ್ರೀ ಶಂಕರ ಜಯಂತಿಯ ಪವಿತ್ರ ದಿನವನ್ನು ರಜಾದಿನವೆಂದು ಘೋಷಿಸಬೇಕೆಂದೂ, ಆದ್ಯಶಂಕರಾಚಾರ್ಯರ ಭಾವಚಿತ್ರವಿರುವ ಅಂಚೆಚೀಟಿಯನ್ನು ಪ್ರಕಟಿಸಬೇಕೆಂದೂ ಕೇಳಿಕೊಂಡಿರುತ್ತದೆ ; ಏಕ್ಯ ತೀರ್ಮಾನಗಳನ್ನು ಕುರಿತು ಏನನ್ನೂ ಹೇಳಲಿಕ್ಕಿರುವುದಿಲ್ಲ.

ಈ ಎರಡು ನಿರ್ಣಯಗಳು ಕೂಡಾ ಉತ್ತಮವಲ್ಲವೆನ್ನಲು ಯಾರಿಂದಲೂ ಸಾಧ್ಯವಿಲ್ಲ : ಆದರೆ ಶ್ರೀ ರಾಮನವಮಿಗೊಂದು ರಜೆಕೊಡದ ಹಾಗೂ ರಜಾದಿನದಂದೇ ಆ ದಿನ ಬಂದರೂ ಅದನ್ನು ಕೆಲಸದ ದಿನವೆಂದು ಘೋಷಿಸುವ ಸರಕಾರದ ಬಳಿ ಶ್ರೀ ಶಂಕರಾಚಾರ್ಯರ ಜನ್ಮದಿನದಂದು ರಜೆ ಕೊಡಬೇಕೆಂದು ಕೇಳಿಗೊಳ್ಳುವುದೆಂದರೆ ಸಾದೆಯು ಮೇಲೆ ಕಾಲೆರೆದಂತಿಲ್ಲವೇ ?

ಅಂಚೆ ಖಾತೆಯು ಆದ್ಯನ ವಿಚಿತ್ರ ರೀತಿಯ ಚಿತ್ರಗಳನ್ನು ಪ್ರಕಟಿಸುತ್ತದೆನ್ನುವುದು ಯಾರಿಗೂ ಗೊತ್ತಿಲ್ಲದ ವಿಷಯವಲ್ಲ : ಹಾಗಿರುವಾಗ ಪ್ರತಿಭಾಪೂರ್ಣ ಮುಖವನ್ನು ಕಳಾಹೀನ ಮುಖದಂತೆ ಪ್ರಕಟವಾಗಿರುವುದನ್ನು ಕಾಣಲು ಯಾವ ಹಿಂದೂವಿಗಾದರೂ ಮನಸ್ಸಾದೀತೇ ? ಅದರ ಮೇಲೆ ತೇದಿಸೂಚಕ ಮುದ್ರೆ ಬಿದ್ದಾಗ ಮತ್ತೆ ಹೇಳುವುದೇ ಬೇಡ. ಇದಕ್ಕೇನೇ ಅನ್ನುವುದು ಅದು ಅಪೂರ್ಣ ಭಾಗ್ಯವೆಂದು.

— ಶಿವಶಂಕರ



ಗೋರಕ್ಷಣ ಪ್ರಾಣದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ವುಡ್‌ಲ್ಯಾಂಡ್ಸ್ ಅಮೋಘ 2 ನೇ ವಾರ

ಶರಾಬಿ (ಹಿಂದಿ) Sharabi

ಪಾತ್ರ— ದೇವಾನಂದ್, ಮಧುಬಾಲ, ಅಲಿಕ ಪವಾರ್, ಮುಂತಾದವರು

ಸಂಗೀತ : ಮದನಮೋಹನ್. — ಡೈರೆಕ್ಷನ್ : ರಾಜ್ ಖೋಸ್ಲ

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜನಪ್ರಿಯ 3 ನೇ ವಾರ

ಅಮೋಘ ಕನ್ನಡ ಚಿತ್ರ — ದಿನ 3 ಆಟಗಳು

ನರ್ಮದಾ ಮೂರ್ತಿ [ಕನ್ನಡ]

ಪಾತ್ರ— ರಾಜಕುಮಾರ್, ಉದಯಕುಮಾರ್, ಹರಿಣಿ, ಮೈನಾವತಿ, ಬಾಲಕೃಷ್ಣ

SHAKTI

SUDHA

A Superb Tonic

Help The Gorakshana

★

"ಗೋರಕ್ಷಣ" ಕ್ಕೆ ಚಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆಶೀರ್ವಾದ ಅನುಗ್ರಹ ಕೃಪೆಯಿಂದಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಜಾರ್ಜನಾಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ ; "ಗೋರಕ್ಷಣ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M S Krishna Rao
at the Satyavadi Press, Camaraapuram Mysore 4